ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ
ನ್ಯಾಯಾಲಯ, ಗಂಗಾವತಿ

ಸಾಕ್ಷಿಯನ್ನು ದಿನಾಂಕ- **02-09-2025** ರಂದು ಕರೆಯಿಸಿ
ಪ್ರಾಮಾಣೀಕರಿಸಲಾಯಿತು.

ಸಿಸಿ ನಂಃ **1530/2016**

| | |
|---|---|
| **ಸಾಕ್ಷಿದಾರನ ಹೆಸರು** | ಇ.ಕಾಳಿಕೃಷ್ಣ |
| **ತಂದೆ/ಗಂಡ/ತಾಯಿ ಹೆಸರು** | ಇ.ಭಾಸ್ಕರ್ ರಾವ್ |
| **ವಯಸ್ಸು** | **46** ವರ್ಷ |
| **ಉದ್ಯೋಗ** | ಪಿ.ಇ ಪೊಲೀಸರ ತರಭೇತಿ ಶಾಲೆ ಐ ಮಂಗಳ ಜಿಃಚಿತ್ರದುರ್ಗಾ |
| **ವಾಸಸ್ಥಳ** | ಹಿರಿಯೂರ್ |
| **ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು** | **ದಿನಾಂಕಃ 02-09-2025** |

ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ದಿನಾಂಕಃ **07-07-2016** ರಿಂದ **15-12-2016** ರ ತನಕ ಗಂಗಾವತಿ ನಗರ ಗ್ರಾಮೀಣ ವೃತ್ತದಲ್ಲಿ ಸಿ.ಪಿ.ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

**2.** ದಿನಾಂಕಃ **27-10-2016** ರಂದು ಚಾಸಾ- **1** ಮತ್ತು ಸಾಕ್ಷಿದಾರರಾದ ಚಾಸಾ-**5** ಮತ್ತು **6** ರವರು ಗಾಯದ ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ತನಿಖೆ ಪೂರ್ಣಗೊಂಡಿದ್ದ ಆರೋಪಿತನ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**5** ರಿಂದ **7** ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಕೆ ವಕೀಲರಿಂದಃ

**3.** ನಾನು ಗಾಯದ ಪ್ರಮರಾಣ ಪತ್ರಗಳನ್ನು ಪಡೆದುಕೊಳ್ಳಲು ನಾನು ನನ್ನ ಸಿಬ್ಬಂದಿಯವರನ್ನು ಕಳುಹಿಸಿದ್ದೆ. ಆ ಸಿಬ್ಬಂದಿಯ

ಹೇಳಿಕೆಯನ್ನು ಪಡೆದುಕೊಂಡಿಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಆವರ-ಜಾವಕ ನಂಬರ ಇಲ್ಲ ಎಂದರೆ ಸರಿ. ಗಾಯದ ಪ್ರಮಾಣ ಪತ್ರಗಳನ್ನು ಈ ಪ್ರಕಣಕ್ಕೆ ಅನುಕೂಲವಾಗುವ ರೀತಿ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಆರೋಪಿ ಯಾವುದೇ ಅಪರಾಧ ಮಾಡಿಲ್ಲ ಅಂತಾ ಕಂಡು ಬಂದರೂ ಸಹ ಅವುಗಳ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕಃ **02-09-2025** ರಂದು ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಪ್ರ.ದ.ನ್ಯಾ.ದಂ.ಗಳು
ಗಂಗಾವತಿ.

ಪ್ರ.ದ.ನ್ಯಾ.ದಂ.ಗಳು, ಗಂಗಾವತಿ.